ಉ) ಸಮಾಜ ಕಲ್ಯಾಣ ಇಲಾಖೆಗೆ ಟೆಂಡರ್‌ದಾರರು ಶ್ರೀ ಬಸವೇಶ್ವರ ಎಂಟರ್‌ಪ್ರೈಸಸ್, ಬೀದರ್ ಇವರಾಗಿದ್ದು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯಕ್ಕೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಶ್ರೀ ಬಸವೇಶ್ವರ ಎಂಟರ್‌ಪ್ರೈಸಸ್, ಬೀದರ್ ಹಾಗೂ ಸಾಮಾಗ್ರಿಗಳನ್ನು ಖರೀದಿಸಲು ಡಿ.ಎಸ್.ಎಂ.ಎಸ್., ಬೆಂಗಳೂರು ಮತ್ತು ಖವಾಸ್, ಹೈದ್ರಾಬಾದ್ ಇವರು ಟೆಂಡರ್‌ದಾರರಾಗಿರುತ್ತಾರೆ.

ಕಲುಷಿತ ನೀರು

836(930); ಶ್ರೀ ಅಶೋಕ ಖೇಣಿ (ಬೀದರ್ ದಕ್ಷಿಣ)

ಅ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಗದಲ್ ಗ್ರಾಮದಲ್ಲಿ ಕಲುಷಿತ ಕುಡಿಯುವ ನೀರಿನ ದೋಷದಿಂದ ಮೃತಪಟ್ಟಿರುವವರ ಸಂಖ್ಯೆಯೆಷ್ಟು (ಮಾಹಿತಿ ಒದಗಿಸುವುದು);

ಆ) ಸರ್ಕಾರ ಮೃತಪಟ್ಟ ವ್ಯಕ್ತಿಗೆ ಪರಿಹಾರ ನೀಡಿದೆಯೇ;

ಇ) ಜಿಲ್ಲೆಯಲ್ಲಿ ಕಲುಷಿತ ನೀರಿನ ದೋಷದಿಂದ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು)?

ಶ್ರೀ ಯು.ಟಿ.ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಗದಲ್ ಗ್ರಾಮದಲ್ಲಿ ಕಲುಷಿತ ಕುಡಿಯುವ ನೀರಿನ ದೋಷದಿಂದ ಮೃತಪಟ್ಟಿರುವವರ ಸಂಖ್ಯೆ: 01

(ಶ್ರೀಮತಿ ಮಹಾದೇವಿ ಗಂಡ ನೀಲಕಂಠ ಶೇಕಾಣೆ ವಯಸ್ಸು : 35) ದಿನಾಂಕ : 22/09/2013 ರಂದು ಮರಣ ಹೊಂದಿರುತ್ತಾರೆ.

ಆ) ಕಲುಷಿತ ನೀರಿನ ದೋಷದಿಂದ ಮೃತ ಪಟ್ಟ ವ್ಯಕ್ತಿಗಳಿಗೆ ಪರಿಹಾರ ನೀಡುವ ವಿಷಯವು ಆರೋಗ್ಯ ಮತ್ತು ಕುಟುಂಬ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಇ) ಜನರಿಗೆ ತೊಂದರೆಯಾಗದಂತೆ ಮುಂಜಾಗೃತ ಕ್ರಮ ಕೈಗೊಳ್ಳಲಾಗಿದೆ.

ಈ) ಕಲುಷಿತ ಕುಡಿಯುವ ನೀರಿನ ದೋಷ ಕಂಡು ಬಂದ ಪ್ರದೇಶಗಳಿಗೆ ಜಿಲ್ಲಾ ತ್ವರಿತ ಪ್ರತಿಕ್ರಿಯಾ ತಂಡದವರು ಹಾಜರಾಗಿ ನೀರಿನ ಮಾದರಿ, ರೋಗ ಪೀಡಿತರ ಮಲದ ಮಾದರಿ ಸಂಗ್ರಹಿಸಿ ಪ್ರಯೋಗಾಲಯದಿಂದ ಫಲಿತಾಂಶ ಪಡೆದು ಅಗತ್ಯ ನಿವಾರಣೋಪಾಯ ಕೈಗೊಂಡು ರೋಗ ಹತೋಟಿಗೆ ತರಲಾಗುತ್ತಿದೆ ಮತ್ತು ಸುತ್ತ ಮುತ್ತಲಿನ ಪ್ರದೇಶದ ಜನರಿಗೆ ಆರೋಗ್ಯ ಶಿಕ್ಷಣ ನೀಡಲಾಗಿದೆ.

ಭತ್ತದ ಬೆಂಬಲ ಬೆಲೆ

837(375); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) ಸರ್ಕಾರದಿಂದ ಭತ್ತದ ಹಾಗೂ ಇನ್ನಿತರ ಬೆಳೆಗಳಿಗೆ ನಿಗಧಿಪಡಿಸಿದ ಬೆಂಬಲ ಬೆಲೆಗಿಂತ ಇನ್ನು ಹೆಚ್ಚಿನ ದರ ನಿಗಧಿಪಡಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಇದ್ದಲ್ಲಿ ಕೈಗೊಳ್ಳುವ ಕ್ರಮಗಳಾವುವು;

ಆ) ಸಿಂಧನೂರಿನಲ್ಲಿ ರಾಜ್ಯ ಸರ್ಕಾರದ ವತಿಯಿಂದ ಭತ್ತದ ಖರೀದಿ ಕೇಂದ್ರಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು ವಿವರ ನೀಡುವುದು?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)

ಅ) 2013–14ನೇ ಸಾಲಿಗೆ ಕೇಂದ್ರ ಸರ್ಕಾರವು ರೈತರಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಸಾಮಾನ್ಯ ಭತ್ತವನ್ನು ಖರೀದಿಸಲು ಪ್ರತಿ ಕ್ವಿಂಟಾಲ್‌ಗೆ ₹ 1310/– ನ್ನು ನಿಗಧಿಪಡಿಸಿದ್ದು, ಇದರೊಂದಿಗೆ ರಾಜ್ಯ